ಫಾರೆಸ್ಟ್ ಇಲಾಖಾ.

ತಾರೀಖು 6ನೇ ಜನವರಿ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸ್ಯ 1878ನೇ ಇಸವಿ 8ನೇ ಜ್ಯೂ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷ್ಯ ಅನುಸರಿಸಿ, ಕಡೂರು ಡಿಸ್ಟ್ರಿಕ್ಟ್ಟು ಬಾಬತು ಈ ಕೆಳಗೆ ಕಾಣಿಸಿರುವ ಸ್ಟೇಟ್ ಫಾರೆಸ್ಟ್ಸುಗಳು, ಪ್ರೈವೇಟ್ಸೆಕ್ಷ್ಯಗಳು, ಮತ್ತು ಸಂದಲ್ ರಿಜರ್ವ್ಸುಗಳು ಷಿಕಾರಿ ಬೇಟೆ ಮುಂತಾದವುಗಳಿಗೆ ಅವಕಾಶವಿಲ್ಲದ ರೀತಿ 1896ನೇ ಇಸವಿ ಜನವರಿ 15ರ ಲಾಗಾಯತು ಮೇ ಆಖೈರ್ ವರಿಗೆ ಬಂದಿ ಮಾಡಿ ಬೆಂಕಿ ಪುಸ್ತುವಾರಿ ಬಗ್ಯೆ ಕಾವಾಡಲ್ಪಡುತ್ತೆ.

ರೂಲ್ಸ್ ಅತಿಕ್ರಮಿಸಿ ಪ್ರವೇಶಿಸುವವರನ್ನ ಕ್ರಮವಾಗಿ ಪ್ರಾಸಿಕ್ಯೂಟ್ ಮಾಡಲ್ಪಡುತ್ತೆ.

ಜಂಜರ್ ನಂ ಬರ್.	ತಾಲ್ಲೂಕು ಹೆಸರು.	ಫಾರೆಸ್ಟ್ ನ ಪ್ರೈವೇಟ್ಸೆಕ್ಷ್ಯಗಳ ಹೆಸರು.
1	ತರೀಕೆರೆ ಮತ್ತು ಎಡೆಹಳ್ಳಿ ಸಬ್ ತಾಲ್ಲೂಕು	ಲಕ್ಕವಳ್ಳಿ ಸ್ಟೇಟ್ ಫಾರೆಸ್ಟ್ ಮತ್ತು ಟೀಕ್ ಪ್ಲಾಂಟೇಷನ್
2	ಕೊಪ್ಪ	ತೇಗೂರಗುಡ್ಡೆ ಸ್ಟೇಟ್ ಫಾರೆಸ್ಟ್
3	ಚಿಕ್ಕಮಗಳೂರು	ಬಸವನಕೋಟೆ ಫಾರೆಸ್ಟ್
4	ಡಿಟೋ	ಮುತ್ತೋಡಿ ಸ್ಟೇಟ್ ಫಾರೆಸ್ಟ್
5	ಡಿಟೋ	ಕೆಳಗಣಿ ಸಂದಲ್ ರಿಜರ್ವ್
6	ಡಿಟೋ	ಮತ್ತಾವರ ಡಿಟೋ
7	ಕೊಪ್ಪ	ಹೆಬ್ಬಟೀಕ್ ಪ್ಲಾಂಟೇಷನ್
8	ಕಡೂರು	ಯಮ್ಮೆದೊಡ್ಡಿ ಸಂದಲ್ ಪ್ಲಾಂಟೇಷನ್
9	ತರೀಕೆರೆ	ಶಂಕರಗಟ್ಟ ಸಂದಲ್ ಪ್ಲಾಂಟೇಷನ್
10	ಕಡೂರು	ಬುಕ್ಕಸಾಗರ ಪ್ಲಾಂಟೇಷನ್
11	ಚಿಕ್ಕಮಗಳೂರು	ಹಂಗಾಜನಹಳ್ಳಿ ಸಂದಲ್ ರಿಜರ್ವ್
12	ಡಿಟೋ	ನೇರಡಿ ಡಿಟೋ
13	ಕೊಪ್ಪ	ಕರಡಿವಾಟ್ಟ ರಿಜರ್ವ್ಡ್ ಫಾರೆಸ್ಟ್

ಸಿ. ಇ. ಯಂ. ರಸಲ್,
ಡೆಪ್ಯೂಟಿ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್.

ಮೈಸೂರ ಗೆಜೆಟ್ ಚಂದಾ ದರ ವಗೈರ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರು ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ	ಟಪ್ಪಾಲ್ ಹಾಸಲು ಮೈಸೂರು ಸೀಮೆ ಹೊರಾಯಿ ಇತರ ಸ್ಥಳಗಳಿಗೆ
	ರೂ. ಆ.	ರೂ. ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚಪ್ಪ ಮಾಹೆ ಯಾ ಕ್ವಾರ್ಟರಿಗೆ		ದಾಮಾಷಾಯಿ ಪ್ರಕಾರ ದರಗಳು.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರಿಯ್ಯಲೇರ್ಷ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.		0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜ್ ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮತ್ತು ಂ 155ನೇ ನಂಬರ್ ಉಳ್ಳ ಗವರ್ಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ವಂದು ಸರಟಿಫಿಕೇಟನ್ನ ಪಡೆದು ಹಾಜರ್ಪಡಿಸಬೇಕಾಗಿರುತ್ತೆ.

1895ನೇ ಇಸವಿ ಜ್ಯೂ 21ನೇ ಮತ್ತು ಂ 24205—6—ಜಿ. 6200ನೇ ನಂಬರ್ ಗವರ್ಮೆಂಟ್ ಆರ್ಡರ್ ಅನುಸರಿಸಿ ಮೇ ಲ್ಕಂಡ ರಿಯಾಯತಿ ದರವು, ನಾಡ ಪಟೇಲರಿಗೂ ಲಗಾವು ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟ್‌ನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟಿಸುಗಳು:—

	ರೂ.	ಆ
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ)	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	1	4

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 347ನೇ ಸೆಕ್ಷರ್ಷ ಅನುಸರಿಸಿ ದಿವಾಳೀ ಅಪ್ಲಿಕೇಷ್ಣಗಳ ಬಗ್ಯೆ ನೋಟಿಸುಗಳಿಗೆ :—

ಮೊದಲನೇ ಸಲಕ್ಕೆ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 354ನೇ ಸೆಕ್ಷರ್ಷಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.

ಜ್ಯೂಡ್ಯಿಕೇಟ್ ಕಾಫೀ ಪಟ್ಟ್ಯೆ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರಿಗಳು ಕೊಡುವ ನೋಟಿಸುಗಳಿಗೆ :—

ಮೊದಲನೇ ಸಲಕ್ಕೆ ಪುಟ 1ಕ್ಕೆ	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ "	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳಪ್ರಕಾರ ಚಾರ್ಜ್ ಮಾಡಲ್ಪಡುತ್ತೆ :—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಜ್ತಿ 1ಕ್ಕೆ	0	8
ಎರಡನೇ ದಫಾ ಡಿಟೋ ಡಿಟೋ	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	0	4

ಟಿಪ್ಪ.—ಚಂದಾ ವಗೈರೇ ಬಗ್ಯೆ ಪೋಸ್ಟೇಜ್ ಲೇಬಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ವಂದಾಣಿ ಯಂತೆ ಜಾಸ್ತೀ ಲೇಬಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರು ಗವರ್ಮೆಂಟ್ ಆಯಾ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದುಗಳು ಇದರಿಂದ ರುಜೂ ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ವ ಇಸ್ತಿಹಾರ್ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ಒಳಗಾಗಿ ಕಂಪ್ಯೆಲರ್ ಆಫಿಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರಿ ಯಿಲ್ಲ.

ಟಿ. ಟಿ. ಲೆನಾರ್ಡ್,
ಮೈಸೂರ ಗೆಜೆಟ್ ಕಂಪ್ಯೆಲರ್.

ಸ್ವಂತ ಪ್ರಕಟನೆ.

ನೋಟಿಸು.

ನಗರ ಡಿವಿಜ್ ಡಿಸ್ಟ್ರಿಕ್ಟು ಜಡ್ಜ್ರವರಿಂದ 1895ನೇ ಇಸವಿ ಡಿಸೆಂಬರ್ ತಾರೀಖು 13ರಲ್ಲಿ ಮಾಡಲ್ಪಟ್ಟ ಹುಕುಂ ಅನುಸರಿಸಿ, ಲೇಟ್ ಮೆಸ್ಟರ್ ಅಂಬಿನಕೋಡಿಗೆ ರಂಗಯ್ಯ ಹೆಬ್ಬಾರ್ರವರ ಆಸ್ಥಿಗಳನ್ನೆಲ್ಲಾ ಅವರ ಮಗ ಮೈನರ್ ಜಯಗಣಪತಿ ಹೆಬ್ಬಾರರಿಗಾಗಿ ನಾನು ವೈವಾಟು ನೋಡುವ ಬಗ್ಯೆ ಮ್ಯಾನೇಜರಳಾಗಿ ಕ್ರಮವರಿತು ಪೊಕರರ್ ಮಾಡಲ್ಪಟ್ಟು ಇರುವದರಿಂದ ಈ ಮೂಲಕ ಸಮಸ್ತರಿಗೂ ನಾನು ತಿಳಿಯಪಡಿಸುವದೇನಂದರೆ,

ಮೇಲ್ಕಂಡ ಕೋರ್ಟು ಹುಕುಂ ಪ್ರಕಾರಕ್ಕೆ ಸದರೀ ಲೇಟ್ ಮೆ॥ ರಂಗಯ್ಯ ಹೆಬ್ಬಾರರ ಯಲ್ಲಾ ಸ್ಥಿರಚರ ಆಸ್ಥಿಗಳ ಸ್ವಾಧೀನವು ಅವರ ಕುಮಾರ ಮೈನರ್ ಸದರೀ ಜಯಗಣಪತಿ ಹೆಬ್ಬಾರನಿಗೋಸ್ಕರ ನನ್ನ ಸ್ವಾಧೀನಕ್ಕೆ ಬಳಪಟ್ಟ ಪ್ರಯುಕ್ತ, ಸದರೀ ಲೇಟ್ ವೆ॥ ರಂಗಯ್ಯ ಹೆಬ್ಬಾರರವರ ಆಸ್ಥಿಗೆ ಸಲ್ಲಬೇಕಾದ ಹಣ ಕಾಸು ಜಿನಸು ಪಾಲು ವಗೈರೆ ಸಮಸ್ತ ಪದಾರ್ಥಗಳನ್ನು ಈ ತಾರೀಖು ಲಗಾಯತು ಆರು ವಾರಗಳ ವಳಗಾಗಿ ನಮಗೆ ಪಾವತಿ ಮಾಡಿ ನಮ್ಮಿಂದ ಕ್ರಮವಾದ ರಶೀತಿ ಪಡಿಯಬೇಕು. ಹಾಗಿಲ್ಲವಾದರ ಜರೂರ್ ನೋಟಿಸು ಕೊಡದೆ ಸದರೀಯವರ ಆಸ್ಥಿಗೆ ಸಲ್ಲಬೇಕಾದ ಯಲ್ಲಾ ಹಣ ಕಾಸು ಜಿನಸು ಫಸಲು ವಗೈರೆ ಸಮಸ್ತ ಪದಾರ್ಥಗಳನ್ನು ಬರಮಾಡಿಕೊಳ್ಳಲು ನ್ಯಾಯಸ್ಥಾನಗಳಲ್ಲಿ ವ್ಯವಹರಣೆ ನಡಿಸಲ್ಪಟ್ಟು ಅದರಿಂದುಂಟಾಗುವ ಖರ್ಚಿಗೂ ಸಹ ದೇಣೀದಾರರು ಗುರಿಯಾಗಲ್ಪಡುವರು.

ಮತ್ತು ಇದರಿಂದ ಲೇಟ್ ಮೆ॥ ರಂಗಯ್ಯ ಹೆಬ್ಬಾರರ ಆಸ್ಥಿಯಿಂದ ತಮಗೆ ಸಲ್ಲಬೇಕಾಗಿ ಹೇಳುವ ಸಾಲಗಾರರುಗಳಿಗೆ ಯುಚ್ಚರಿಸುವದೇನಂದರೆ,—ತಮಗೆ ಬರಬೇಕೆಂಬ ಲೇಣಿ ತಖ್ಮೀಲ್ ಸಹಿತ ಈ ತಾರೀಖು ಲಗಾಯತು ಮೂರು ತಿಂಗಳುಗಳ ವಳಗಾಗಿ ಅಂಥಾ